**OS No. 158/2016**
**PW-2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **03.12.2019**

ಪಾಟೀ ಸವಾಲುಃ ಶ್ರೀ. ಎ. ಎಸ್. ಎಸ್. ಪ್ರತಿವಾದಿ ಪರ ವಕೀಲರಿಂದ.

1. ನಾನು ನನ್ನ ಸಂಪೂರ್ಣ ವಿದ್ಯಾಭ್ಯಾಸವನ್ನು ಬೆಳಗಾವಿನಲ್ಲೆ ಮಾಡಿದ್ದೇನೆ. ನಾನು ನನ್ನ ಅತ್ತೆಯ ಮನೆಯಲ್ಲಿ ಇದ್ದು ನನ್ನ ವಿದ್ಯಾಭ್ಯಾಸ ಮಾಡಿದ್ದೇನೆ. ಮುಕ್ತಿಯಾರ ನಾಮೆಯನ್ನು ನನ್ನ ತಂದೆ ನನ್ನ ಹೆಸರಿಗೆ ಬರೆದು ಕೊಟ್ಟಿದ್ದಾರೆ. ಮುಕ್ತಿಯಾರ ನಾಮೆಯಲ್ಲಿ ಬರೆದಿರುವ ವಿಷಯ ಎಲ್ಲಾ ಸತ್ಯ ಇದೆ ಮತ್ತು ನನ್ನ ತಂದೆಗೆ ಗೊತ್ತಿದೆ ಎಂದರೆ ಸರಿ. ನನ್ನ ತಂದೆಗೆ ಆರೋಗ್ಯ ಸರಿ ಇಲ್ಲದ ಕಾರಣ ನನ್ನ ಹೆಸರಿಗೆ ಮುಕ್ತಿಯಾರ ನಾಮೆಯನ್ನು ಬರೆದು ಕೊಟ್ಟಿದ್ದಾರೆ. ನನ್ನ ತಂದೆಗೆ 5–6 ವರ್ಷದಿಂದ ಆಗಾಗ ಅನಾರೋಗ್ಯದಿಂದ ಇದ್ದಾರೆ. ಮುಕ್ತಿಯಾರ ನಾಮೆಯನ್ನು ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೆ ನನ್ನ ತಂದೆ ಬರೆದುಕೊಟ್ಟಿದ್ದಾರೆ. ನನ್ನ ತಂದೆಗೆ ಈಗ 78 ವರ್ಷ.

2. ದಾವಾ ಆಸ್ತಿಯನ್ನು ನನ್ನ ಅಜ್ಜ ಮೊದಲು ಖರೀದಿ ಮಾಡಿದ್ದರು. ಅದರ ವಿಸ್ತೀರ್ಣ 126.75 *sqmtr* ಇರುತ್ತದೆ. ಖರೀದಿಸಿದಾಗ ದಾವಾ ಆಸ್ತಿಯಲ್ಲಿ ಹಳೆ ಮನೆ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಒಟ್ಟು ಆಸ್ತಿಯಲ್ಲಿ ಕೇದಾರ ಬಾಗೋಜಿ ಪವಾರ, ಸಂಕ್ರಾಮ ಬಾಗೋಜಿ ಪವಾರ ಮತ್ತು ಸುಭಾಂಜಿ ಬಾಗೋಜಿ ಪವಾರ ಇವರೆಲ್ಲಾ ಮಾಲಿಕರಿದ್ದಾರೆ. ಕೇದಾರ ಬಾಗೋಜಿ ಪವಾರ, ಸಂಕ್ರಾಮ ಬಾಗೋಜಿ ಪವಾರ ಮತ್ತು ಸುಭಾಂಜಿ ಬಾಗೋಜಿ ಪವಾರ ಅವರಿಗೆ ಇಬ್ಬರು ಸಹೋದರಿಯರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕೇದಾರ ಬಾಗೋಜಿ ಪವಾರ ಇವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದೆರ ಸರಿ. ಅವರು ಹೆಸರು ವಿಜಯಾ

**OS No. 158/2016**
**PW-2**

ಮತ್ತು ವಿಮಲ. ಸಂಕ್ರಾಮ ಬಾಗೋಜಿ ಪವಾರ ಇವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ. ಸುಭಾಂಜಿ ಬಾಗೋಜಿ ಪವಾರ ಇವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಇದ್ದಾರೆ. ನನ್ನ ತಂದೆ ಮತ್ತು ಆತನ ಅಣ್ಣ ತಮ್ಮದಿರು ಮೌಖಿಕ ಪಾಲು ವಿಭಾಗ ಮಾಡಿಕೊಂಡಿದ್ದರಿಂದ ದಾವಾ ಆಸ್ತಿಯ 1/3 ನನ್ನ ತಂದೆಯ ಭಾಗಕ್ಕೆ ಬಂದಿತ್ತು. ನಮ್ಮ ತಂದೆಯವರು ಮತ್ತು ಆತನ ಅಣ್ಣ ತಮ್ಮದಿರು ಸೇರಿ ರಾಜಿ ಮಾಡಿಕೊಂಡು ಈ ರೀತಿ ಪಾಲು ವಿಭಾಗ ಮಾಡಿಕೊಂಡಿದ್ದಾರೆ. ಪಾಲು ವಿಭಾಗದ ಪ್ರಕಾರ ಸಿ.ಟಿ.ಎಸ್. ದಾಖಲೆಗಳಲ್ಲಿ ಹೆಸರು ನೊಂದಾಯಿತು ಎಂದರೆ ಸರಿ. ಸಿ,ಟಿ.ಎಸ್. ದಾಖಲೆಗಳಲ್ಲಿ ಪಾಲು ವಿಭಾಗದ ಪ್ರಕಾರ ಹೆಸರುಗಳು ವರ್ಗಾವಣೆ ಆಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೊದಲಿನಿಂದಲೂ ಪಾಲು ವಿಭಾಗ ಆದ ಬಗ್ಗೆ ದಾಖಲೆಗಳಲ್ಲಿ ನಮೂದು ಇತ್ತು. ಬೆಳಗಾವಿನಲ್ಲೆ ಪಾಲು ವಿಭಾಗ ಮಾಡಿಕೊಂಡಿದ್ದೇವು. ಪಾಲು ವಿಭಾಗ ಆದಾಗ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ.

ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಮತ್ತು ಜೆ. ಎಂ. ಎಫ್. ಸಿ., ಬೆಳಗಾವಿ.